## ಕರ್ನಾಟಕ ಸರ್ಕಾರದ ನಡವಳಿಗಳು

ವಿಷಯ: ಶ್ರೀ ಸೂರ್ಯನಾರಾಯಣ ಭಟ್, ತಾಂತ್ರಿಕ ಸಹಾಯಕರು ಹಾಗೂ ಶ್ರೀ ಸುಧೀನ್ ಡಿ.ಎಸ್., ಸಹಾಯಕ ಇಂಜಿನಿಯರ್, ಪಂಚಾಯತ್ ರಾಜ್ ಇಂಜಿನಿಯರಿಂಗ್ ವೃತ್ತ, ಮಂಗಳೂರು ಇವರುಗಳ ವಿರುದ್ಧದ ಆರೋಪಗಳ ಕುರಿತಂತೆ ಸೇವೆಯಿಂದ ಅಮಾನತ್ತುಪಡಿಸುವ ಬಗ್ಗೆ.

ಓದಲಾಗಿದೆ: ಮುಖ್ಯ ಇಂಜಿನಿಯರ್, ಪಂಚಾಯತ್ ರಾಜ್ ಇಂಜಿನಿಯರಿಂಗ್ ಇಲಾಖೆ ಇವರ ಪತ್ರ ಸಂಖ್ಯೆ: ಮುಇಂ./ಪಂ.ರಾ.ಇಂ.ಇ/ಬೆಂ/ಆ.ಶಾಖೆ/ಸಿ-10/29/ 2018-19/ 3938 ದಿನಾಂಕ: 07.11.2018.

ಪ್ರಸ್ತಾವನೆ:

ಮೇಲೆ ಓದಲಾದ ಮುಖ್ಯ ಇಂಜಿನಿಯರ್, ಪಂ.ರಾ.ಇಂ.ಇಲಾಖೆ ಇವರ ದಿನಾಂಕ: 07.11.2018 ರ ಪತ್ರದಲ್ಲಿ ಭ್ರಷ್ಟಾಚಾರ ನಿಗ್ರಹ ದಳ ಪೋಲೀಸ್ ಠಾಣೆ, ದಕ್ಷಿಣ ಕನ್ನಡ ಜಿಲ್ಲೆ, ಮಂಗಳೂರು ಇವರ ಪ್ರಕರಣ ಸಂಖ್ಯೆ: 15/2018 ಕಲಂ 7 ಭ್ರಷ್ಟಾಚಾರ ನಿರ್ಭಂಧಕ ಕಾಯ್ದೆ 1988 (ಭ್ರಷ್ಟಾಚಾರ ನಿರ್ಭಂಧಕ)(ತಿದ್ದುಪಡಿ) ಕಾಯ್ದೆ 2018 ರಲ್ಲಿ ದಿನಾಂಕ: 26.10.2018 ರಂದು ಮಂಗಳೂರು ಪಂಚಾಯತ್ ರಾಜ್ ಇಂಜಿನಿಯರಿಂಗ್ ವೃತ್ತ ಕಛೇರಿಯ (1) ಶ್ರೀ ರವೀಂದ್ರ ಕಿಣಿ, ಅಧೀಕ್ಷಕ ಅಭಿಯಂತರರು ಹಾಗೂ (2) ಶ್ರೀ ಸೂರ್ಯನಾರಾಯಣ ಭಟ್, ತಾಂತ್ರಿಕ ಸಹಾಯಕರು, ಇವರುಗಳ ವಿರುದ್ಧ ಲಂಚದ ಆಪಾದನೆಯ ಫಿರ್ಯಾದು ದಾಖಲಾಗಿದ್ದು, ದಿನಾಂಕ: 26.10.2018 ರಂದು 16.40 ಗಂಟೆಗೆ ಪಂಚಾಯತ್ ರಾಜ್ ಇಂಜಿನಿಯರಿಂಗ್ ವೃತ್ತ ಕಛೇರಿಯಲ್ಲಿ ಶ್ರೀ ಸೂರ್ಯನಾರಾಯಣ ಭಟ್, ತಾಂತ್ರಿಕ ಸಹಾಯಕರು ಮತ್ತು ಶ್ರೀ ಸುಧೀನ್ ಡಿ.ಎಸ್., ಸಹಾಯಕ ಇಂಜಿನಿಯರ್ ಇವರುಗಳು ಫಿರ್ಯಾದುದಾರರಿಂದ ರೂ.25,000/-ಗಳ ಲಂಚವನ್ನು ಪಡೆದುಕೊಳ್ಳುವ ಸಮಯದಲ್ಲಿ ಭ್ರಷ್ಟಾಚಾರ ನಿಗ್ರಹ ದಳದ ಅಧಿಕಾರಿಗಳು ಟ್ರ್ಯಾಪ್ ಮಾಡಿ ದಸ್ತಗಿರಿ ಮಾಡಿ ನಂತರ ಅದೇ ದಿನ ಸಂಜೆ ಮಂಗಳೂರು 3ನೇ ಹೆಚ್ಚುವರಿ ಸೆಷನ್ಸ್ ಜಿಲ್ಲಾ, ಸತ್ರ ಮತ್ತು ವಿಶೇಷ ನ್ಯಾಯಾಲಯದ ಮುಂದೆ ಹಾಜರುಪಡಿಸಿದ್ದು, ಮಾನ್ಯ ನ್ಯಾಯಾಲಯವು ಅವರುಗಳನ್ನು ದಿನಾಂಕ: 09.11.2018 ರವರೆಗೆ ನ್ಯಾಯಾಂಗ ಬಂಧನಕ್ಕೆ ಆದೇಶಿಸಿರುತ್ತದೆಂದು ತಿಳಿಸಿರುತ್ತಾರೆ. ತದನಂತರ ಸದರಿಯವರುಗಳು ದಿನಾಂಕ: 30.10.2018 ರಂದು ಜಾಮೀನಿನ ಮೇಲೆ ಬಿಡುಗಡೆ ಹೊಂದಿರುವರೆಂಬ ಮಾಹಿತಿಯನ್ನು ಸರ್ಕಾರಕ್ಕೆ ಸಲ್ಲಿಸಿರುತ್ತಾರೆ.

ಪ್ರಕರಣಕ್ಕೆ ಸಂಬಂಧಿಸಿದಂತೆ ಲಭ್ಯವಿರುವ ದಾಖಲೆಗಳನ್ನು ಸರ್ಕಾರವು ಪರಿಶೀಲಿಸಿದೆ. ಒಂದನೇ ದರ್ಜೆ ಗುತ್ತಿಗೆದಾರರಾದ ಶ್ರೀ ಎಂ.ಅಬೂಬ್ ಕರ್, ಮೂಡಿಗೆರೆ, ಚಿಕ್ಕಮಗಳೂರು ಇವರ ಮಗ ಶ್ರೀ ಆದಮ್ ರವರು ತಾವು ನಿರ್ವಹಿಸಬೇಕಾಗಿರುವ ಸರ್ಕಾರಿ ಪದವಿಪೂರ್ವ ಕಾಲೇಜಿಗಾಗಿ 2 ಕೊಠಡಿಗಳು ಮತ್ತು ಶೌಚಾಲಯ ನಿರ್ಮಾಣ ಕಾಮಗಾರಿಗೆ ಸಂಬಂಧಿಸಿದ ಟೆಂಡರ್ ಅನುಮೋದನೆ ನೀಡಲು ಮಂಗಳೂರು ಪಂಚಾಯ್ ರಾಜ್ ಇಂಜಿನಿಯರಿಂಗ್ ವೃತ್ತ

ಕಛೇರಿಯ (1) ಶ್ರೀ ರವೀಂದ್ರ ಕಿಣಿ, ಅಧೀಕ್ಷಕ ಅಭಿಯಂತರರು ಹಾಗೂ (2) ಶ್ರೀ ಸೂರ್ಯನಾರಾಯಣ ಭಟ್, ತಾಂತ್ರಿಕ ಸಹಾಯಕರು, ಇವರುಗಳು ಅಕ್ರಮ ಸಂಭಾವನೆ ಬೇಡಿಕೆ ಇಟ್ಟಿರುವ ಕುರಿತು ದೂರು ದಾಖಲಿಸಿರುತ್ತಾರೆ. ಅದರನ್ವಯ, ಭ್ರಷ್ಟಾಚಾರ ನಿಗ್ರಹ ದಳ ಪೊಲೀಸ್ ಠಾಣೆ, ಮಂಗಳೂರು ರವರು ಭ್ರಷ್ಟಾಚಾರ ನಿಯಂತ್ರಣ ಕಾಯ್ದೆ 1988ರನ್ವಯ ಕ್ರಿಮಿನಲ್ ಮೊಕದ್ದಮೆ ಸಂಖ್ಯೆ: 15/2018 ಪ್ರಕರಣವನ್ನು ದಾಖಲಿಸಿಕೊಂಡು ದಿನಾಂಕ: 26.10.2018 ರಂದು ಟ್ರ್ಯಾಪ್ ಮಾಡಿದ್ದು, ದೂರುದಾರರಿಂದ ರೂ.25,000/-ಗಳ ಅಕ್ರಮ ಸಂಭಾವನೆಯನ್ನು ಶ್ರೀ ಡಿ.ಎಸ್.ಸುಧೀನ್, ಸಹಾಯಕ ಇಂಜಿನಿಯರ್ ಇವರು ಖುದ್ದು ಸ್ವೀಕರಿಸಿದ ಸಂದರ್ಭದಲ್ಲಿ ಸಿಕ್ಕಿ ಬಿದ್ದಿರುತ್ತಾರೆ. ಈ ರೀತಿ ಸದರಿಯವರು ಅಕ್ರಮ ಸಂಭಾವನೆ ಪಡೆದಿರುವುದು ಸ್ಥಳ ಮಹಜರ್, ಹಣ ವಶಪಡಿಸಿಕೊಳ್ಳುವಿಕೆ ಮತ್ತು ಕೈ ತೊಳೆದ ಸಂದರ್ಭದಲ್ಲಿ ಗುಲಾಬಿ ಬಣ್ಣಕ್ಕೆ ತಿರುಗುವ ಮೂಲಕ ಹಣ ಸ್ವೀಕಾರದ ಆರೋಪ ಸ್ಪಷ್ಟವಾಗಿರುತ್ತದೆ. ಶ್ರೀ ಸೂರ್ಯನಾರಾಯಣ ಭಟ್, ತಾಂತ್ರಿಕ ಸಹಾಯಕರು, ಇವರು ಅಕ್ರಮ ಸಂಭಾವನೆ ಸ್ವೀಕರಿಸಿಲ್ಲವಾದರೂ ಟ್ರ್ಯಾಪ್ ನಡೆದ ಸಂದರ್ಭದಲ್ಲಿ ಲೆಕ್ಕಕ್ಕಿಲ್ಲದ ರೂ.26,000/-ಗಳು ಅವರ ಟಿಫಿನ್ ಬಾಕ್ಸ್ ನಲ್ಲಿ ದೊರೆತಿದ್ದರಿಂದ ಹಾಗೂ ದೂರವಾಣಿ ಸಂಭಾಷಣೆಯನ್ವಯ ಸದರಿಯವರು ಸಹ ಅಕ್ರಮ ಸಂಭಾವನೆ ಪಡೆಯುವುದರಲ್ಲಿ ಭಾಗಿದಾರರಾಗಿರುವುದು ಮೇಲ್ನೋಟಕ್ಕೆ ಕಂಡುಬಂದಿದ್ದರಿಂದ ಸದರಿಯವರುಗಳನ್ನು ದಿನಾಂಕ: 26.10.2018ರಂದು ದಸ್ತಗಿರಿ ಮಾಡಿ ಮಂಗಳೂರು 3ನೇ ಹೆಚ್ಚುವರಿ ಸೆಷನ್ಸ್ ಜಿಲ್ಲಾ ಮತ್ತು ಸತ್ರ ಮತ್ತು ವಿಶೇಷ ನ್ಯಾಯಾಲಯದ ಮುಂದೆ ಹಾಜರು ಪಡಿಸಿದ್ದು, ಮಾನ್ಯ ನ್ಯಾಯಾಲಯವು ಅವರುಗಳನ್ನು ನ್ಯಾಯಾಂಗ ಬಂಧನದಲ್ಲಿರಿಸಲು ಆದೇಶಿಸಿರುತ್ತದೆ. ತದನಂತರ ಸದರಿ ಆಪಾದಿತ ಅಧಿಕಾರಿಗಳು ದಿನಾಂಕ: 30.10.2018 ರಂದು ಜಾಮೀನಿನ ಮೇಲೆ ಬಿಡುಗಡೆ ಹೊಂದಿರುವುದು ಮಾನ್ಯ ನ್ಯಾಯಾಲಯದ ಆದೇಶದಿಂದ ಕಂಡುಬರುತ್ತದೆ.

ಆಪಾದಿತ ಅಧಿಕಾರಿಗಳಾದ ಶ್ರೀ ಸೂರ್ಯನಾರಾಯಣ ಭಟ್, ತಾಂತ್ರಿಕ ಸಹಾಯಕರು ಮತ್ತು ಶ್ರೀ ಡಿ.ಎಸ್.ಸುಧೀನ್, ಸಹಾಯಕ ಇಂಜಿನಿಯರ್, ಇವರುಗಳು ದಿನಾಂಕ: 26.10.2018 ರಿಂದ 30.10.2018ರವರೆಗೆ ನ್ಯಾಯಾಂಗ ಬಂಧನದಲ್ಲಿ ಕಳೆದಿರುತ್ತಾರೆ. ಕರ್ನಾಟಕ ನಾಗರೀಕ ಸೇವಾ(ವ.ನಿ.ಮೇ) ನಿಯಮಗಳ ನಿಯಮ 10(2)ರ ಅನುಸಾರ 48 ಗಂಟೆಗಳಿಗೂ ಮೀರಿ ನ್ಯಾಯಾಂಗ ಬಂಧನದಲ್ಲಿ ಇದ್ದಲ್ಲಿ ಅಂತಹ ಅವಧಿಯನ್ನು ಅಮಾನತ್ತಿನಲ್ಲಿ ಕಳೆದ ಅವಧಿ ಎಂದು ಪರಿಭಾವಿಸಬೇಕಾಗುತ್ತದೆ.

ಅಲ್ಲದೆ, ಪ್ರಕರಣದ ವಾಸ್ತವಾಂಶಗಳು ಹಾಗೂ ಲಭ್ಯವಿರುವ ದಾಖಲೆಗಳಿಂದ ಕಂಡು ಬರುವುದೇನೆಂದರೆ, ಆಪಾದಿತರಾದ ಶ್ರೀ ಡಿ.ಎಸ್.ಸುಧೀನ್, ಸಹಾಯಕ ಇಂಜಿನಿಯರ್, ಇವರು ಅಕ್ರಮ ಸಂಭಾವನೆ ಬೇಡಿಕೆ ಹಾಗೂ ಅದನ್ನು ಪಡೆಯುವ ಸಂದರ್ಭದಲ್ಲಿ ಭ್ರಷ್ಟಾಚಾರ ನಿಗ್ರಹ ದಳವು ಬೀಸಿದ ಬಲೆಗೆ ಸಿಕ್ಕಿ ಬಿದ್ದಿರುವುದರಿಂದ ಸದರಿಯವರನ್ನು ಸೇವೆಯಲ್ಲಿ ಮುಂದುವರೆಸಿದಲ್ಲಿ, ಸಾಕ್ಷ್ಯಗಳನ್ನು ನಾಶಪಡಿಸುವುದು,ದಾಖಲೆಗಳನ್ನು ತಿದ್ದುವುದು/ ತಿರುಚುವ ಸಾಧ್ಯತೆಗಳಿರುವುದರಿಂದ ಸದರಿಯವರ ವಿರುದ್ಧ ಕೈಗೊಳ್ಳಬಹುದಾದ ಕ್ರಮಗಳನ್ನು ಬಾಕಿ ಇರಿಸಿ

ಅವರನ್ನು ಸೇವೆಯಿಂದ ಅಮಾನತ್ತುಪಡಿಸುವುದು ಸೂಕ್ತವೆಂದು ಸರ್ಕಾರವು ನಿರ್ಧರಿಸಿರುತ್ತದೆ. ಅದರಂತೆ ಈ ಆದೇಶ.

**ಸರ್ಕಾರದ ಆದೇಶ ಸಂಖ್ಯೆ: ಗ್ರಾಅಪ 98 ಇಎನ್ ಕ್ಯೂ 2018**
**ಬೆಂಗಳೂರು ದಿನಾಂಕ:11.12.2018**

ಪ್ರಸ್ತಾವನೆಯಲ್ಲಿ ವಿವರಿಸಿರುವ ಅಂಶಗಳ ಹಿನ್ನಲೆಯಲ್ಲಿ ಸರ್ಕಾರವು ಶ್ರೀ ಸೂರ್ಯನಾರಾಯಣ ಭಟ್, ತಾಂತ್ರಿಕ ಸಹಾಯಕರು, ಪಂಚಾಯತ್ ರಾಜ್ ಇಂಜಿನಿಯರಿಂಗ್ ವೃತ್ತ ಕಛೇರಿ, ಮಂಗಳೂರು ಹಾಗೂ ಶ್ರೀ ಡಿ.ಎಸ್.ಸುಧೀನ್, ಸಹಾಯಕ ಇಂಜಿನಿಯರ್, ಪಂಚಾಯತ್ ರಾಜ್ ಇಂಜಿನಿಯರಿಂಗ್ ವೃತ್ತ ಕಛೇರಿ, ಮಂಗಳೂರು ಇವರುಗಳು ದಿನಾಂಕ: 26.10.2018 ರಿಂದ 30.10.2018ರವರೆಗೆ ನ್ಯಾಯಾಂಗ ಬಂಧನದಲ್ಲಿ ಕಳೆದ ಅವಧಿಯನ್ನು ಕರ್ನಾಟಕ ನಾಗರೀಕ ಸೇವಾ(ವ.ನಿ.ಮೇ) ನಿಯಮಗಳ ನಿಯಮ 10(2)(ಎ)ರ ಅನುಸಾರ "**ಅಮಾನತ್ತಿನಲ್ಲಿ ಕಳೆದ ಅವಧಿ**" ಎಂದು ಪರಿಗಣಿಸಿ ಆದೇಶಿಸಿದೆ.

ಮುಂದುವರೆದು, ಶ್ರೀ ಸುಧೀನ್ ಡಿ.ಎಸ್., ಸಹಾಯಕ ಇಂಜಿನಿಯರ್, ಇವರ ವಿರುದ್ಧ ಕಂಡುಬಂದಿರುವ ಕ್ರಿಮಿನಲ್ ಸ್ವರೂಪದ ದುರ್ನಡತೆಯ ಆರೋಪಗಳ ಕುರಿತು ಕ್ರಿಮಿನಲ್ ಮೊಕದ್ದಮೆ ಹಾಗೂ ಇಲಾಖಾ ವಿಚಾರಣೆಗಳ ಮೂಲಕ ಕೈಗೊಳ್ಳಬೇಕಾದ ಕ್ರಮಗಳನ್ನು ಬಾಕಿ ಇರಿಸಿ ಕರ್ನಾಟಕ ನಾಗರೀಕ ಸೇವಾ (ವ.ನಿ.ಮೇ) ನಿಯಮಾವಳಿಗಳ ನಿಯಮ 10(1)(ಎ) ರನ್ವಯ ಸದರಿಯವರನ್ನು ತಕ್ಷಣದಿಂದ ಜಾರಿಗೆ ಬರುವಂತೆ ಸೇವೆಯಿಂದ ಅಮಾನತ್ತುಪಡಿಸಿ ಆದೇಶಿಸಿದೆ.

ಸದರಿಯವರು ಅಮಾನತ್ತಿನ ಅವಧಿಯಲ್ಲಿ ಸಕ್ಷಮ ಪ್ರಾಧಿಕಾರದ ಪೂರ್ವಾನುಮತಿ ಇಲ್ಲದೇ ಕೇಂದ್ರ ಸ್ಥಾನವನ್ನು ಬಿಡತಕ್ಕದ್ದಲ್ಲ.

ಸದರಿಯವರು ನಿಯಮಾನುಸಾರ ಜೀವನಾಧಾರ ಭತ್ಯೆಯನ್ನು ಪಡೆಯಲು ಅರ್ಹರಿದ್ದು, ಅವರ ಹುದ್ದೆಯ ಹಕ್ಕನ್ನು (ಲೀನ್) ಮುಖ್ಯ ಇಂಜಿನಿಯರ್, ಪಂಚಾಯತ್ ರಾಜ್ ಇಂಜಿನಿಯರಿಂಗ್ ಇಲಾಖೆ, ಬೆಂಗಳೂರು ಇಲ್ಲಿಗೆ ವರ್ಗಾಯಿಸಿದೆ.

ಕರ್ನಾಟಕ ರಾಜ್ಯಪಾಲರ ಆಜ್ಞಾನುಸಾರ
ಮತ್ತು ಅವರ ಹೆಸರಿನಲ್ಲಿ

(ಎಸ್.ರಂಗನಗೌಡ) 11/12/2018
ಸರ್ಕಾರದ ಅಧೀನ ಕಾರ್ಯದರ್ಶಿ (ಸೇವೆಗಳು-ಎ)
ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಇಲಾಖೆ

ಇವರಿಗೆ:

1. ಮಹಾಲೇಖಪಾಲರು, (ಅ ಮತ್ತು ಇ) ಕರ್ನಾಟಕ, ಬೆಂಗಳೂರು.
2. ಮುಖ್ಯ ಇಂಜಿನಿಯರ್, ಪಂಚಾಯತ್ ರಾಜ್ ಇಂಜಿನಿಯರಿಂಗ್ ಇಲಾಖೆ, ಗ್ರಾಮೀಣಾಭಿವೃದ್ಧಿ ಭವನ, ಬೆಂಗಳೂರು.

3. ಅಧೀಕ್ಷಕ ಅಭಿಯಂತರರು, ಪಂಚಾಯತ್ ರಾಜ್ ಇಂಜಿನಿಯರಿಂಗ್ ವೃತ್ತ, ಮಂಗಳೂರು.
4. ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿ, ಜಿಲ್ಲಾ ಪಂಚಾಯತ್, ದಕ್ಷಿಣ ಕನ್ನಡ ಜಿಲ್ಲೆ, ಮಂಗಳೂರು
5. ಭ್ರಷ್ಟಾಚಾರ ನಿಗ್ರಹದಳ, ಪೊಲೀಸ್ ಠಾಣೆ, ದಕ್ಷಿಣ ಕನ್ನಡ ಜಿಲ್ಲೆ, ಮಂಗಳೂರು.
6. ಸಂಬಂಧಪಟ್ಟ ಆಪಾದಿತ ಅಧಿಕಾರಿ / ನೌಕರರಿಗೆ – ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿ, ಜಿಲ್ಲಾ ಪಂಚಾಯತ್, ದಕ್ಷಿಣ ಕನ್ನಡ, ಮಂಗಳೂರು ಇವರ ಮುಖಾಂತರ.
7. ಮಾನ್ಯ ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಸಚಿವರ ಆಪ್ತ ಕಾರ್ಯದರ್ಶಿಯವರಿಗೆ.
8. ಗ್ರಾ.ಅ.ಪಂ.ರಾಜ್ ಇಲಾಖೆಯ ಪ್ರಧಾನ ಕಾರ್ಯದರ್ಶಿ / ಉಪ ಕಾರ್ಯದರ್ಶಿ (ಆಡಳಿತ) ಇವರ ಆಪ್ತ ಕಾರ್ಯದರ್ಶಿ / ಆಪ್ತ ಸಹಾಯಕರು.
9. ಹೆಚ್ಚುವರಿ ಪ್ರತಿ : ರಕ್ಷಾ ಕಡತ : ಕಂಪ್ಯೂಟರ್ ಸೆಲ್.